**<u>ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ವೈ.ಎಂ. ಸತೀಶ್ ಇವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಕಂದಾಯ ಸಚಿವರ ಹೇಳಿಕೆ:</u>**

**<u>ಸೂಚನೆ:-</u>**

ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕು, ಚೋರನೂರು ಹೋಬಳಿ ಕಾಳಿಂಗೇರಿ ಗ್ರಾಮ ಸರ್ವೆ ನಂಬರ್‌ಗಳು:28, 31, 32, 35, 240, 30, 29, 34, 302 ಸರ್ಕಾರಿ ಜಮೀನುಗಳು ಮತ್ತು ಪಟ್ಟಾ ಜಮೀನುಗಳನ್ನು ಸುಮಾರು 200 ಎಕರೆ ಮತ್ತು ಸೋಮಲಾಪುರ ಗ್ರಾಮದಲ್ಲಿ ಉದ್ದೇಶಿತ ಪೆಲೆಟ್ ಕಾರ್ಖಾನೆಗೆ ಮಂಜೂರಾದ ಸರ್ಕಾರಿ ಜಮೀನಿನಲ್ಲಿ ಎಂ.ಎಸ್.ಪಿ.ಎಲ್ ಕಂಪನಿಗಳಿಗೆ ಗುತ್ತಿಗೆ ಆಧಾರದ ಮೇರೆಗೆ ಮಂಜೂರು ಮಾಡುವುದನ್ನು ಕೈ ಬಿಡಲು ಸ್ಥಳೀಯ ರೈತ ಹೋರಾಟ ಸಮಿತಿ, ಸಂಡೂರು ತಾಲ್ಲೂಕು ಇವರುಗಳು ಹೋರಾಟ ನಡೆಸುತ್ತಿರುವ ಕುರಿತು ಹಾಗೂ ಈ ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿರುವವರಿಗೆ ಬಗುರು ಹುಕ್ಕುಂ ಸಕ್ರಮ ಸಮಿತಿಯಡಿ ಹಕ್ಕು ಪತ್ರ ನೀಡಿ ರೈತರ ಮನವಿಯನ್ನು ಆಲಿಸಲು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**<u>ಹೇಳಿಕೆ:-</u>**

ವ್ಯವಸ್ಥಾಪಕ ನಿರ್ದೇಶಕರು, ಇನ್ವೆಸ್ಟ್ ಕರ್ನಾಟಕ ರವರ ಪತ್ರ ಸಂಖ್ಯೆ:KUM/DD-6/237/2021-22, ದಿನಾಂಕ:03.06.2022ರಲ್ಲಿ ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕು, ಚೋರನೂರು ಹೋಬಳಿ, ಕಾಳಿಂಗೇರಿ ಹಾಗೂ ಅಂಕಮನಾಳ ಗ್ರಾಮದಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ ಒಟ್ಟು 201.92 ಎಕರೆ ಸರ್ಕಾರಿ ಜಮೀನನ್ನು ಮೆ|| ಎಂ.ಎಸ್.ಪಿ.ಎಲ್. ಲಿಮಿಟೆಡ್, ಹೊಸಪೇಟೆ ರವರಿಗೆ ಮಂಜೂರು/ಗುತ್ತಿಗೆ ನೀಡುವಂತೆ ಕೋರಿ ಸ್ವೀಕೃತವಾಗಿರುವ ಪ್ರಸ್ತಾವನೆಯು ಜಿಲ್ಲಾಧಿಕಾರಿ, ಬಳ್ಳಾರಿ ಇವರ ಪರಿಶೀಲನೆಯಲ್ಲಿರುತ್ತದೆ.

ಅಧ್ಯಕ್ಷರು, ಕರ್ನಾಟಕ ರಾಜ್ಯ ಹಸಿರು ರೈತ ಸಂಘ(ರಿ), ಸುಶೀಲಾನಗರ, ಸಂಡೂರು ತಾಲ್ಲೂಕು ಮತ್ತು ಅಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ(ರಿ), ಬಳ್ಳಾರಿ ರವರು ಪ್ರಸ್ತಾಪಿತ ಜಮೀನುಗಳಲ್ಲಿ ರೈತರು ಸಾಗುವಳಿ ಮಾಡಿತ್ತಿದ್ದು, ನಮೂನೆ 57ರಡಿ ಸ್ವೀಕೃತವಾದ ಅರ್ಜಿಗಳನ್ನು ಇತ್ಯರ್ಥಪಡಿಸದೆ ಸದರಿ ಕೈಗಾರಿಕಾ ಸಂಸ್ಥೆಗೆ ಯಾವುದೇ ಜಮೀನುಗಳನ್ನು ಮಂಜೂರು ಮಾಡಬಾರದೆಂದು ಮನವಿಗಳನ್ನು ತಹಶೀಲ್ದಾರರು, ಸಂಡೂರು ರವರಿಗೆ ಸಲ್ಲಿಸಿದ್ದು, ಸದರಿ ಮನವಿಗಳು ತಹಶೀಲ್ದಾರರ ಪರಿಶೀಲನೆಯಲ್ಲಿರುತ್ತವೆ.

ಮುಂದುವರೆದು, ಪ್ರಸ್ತಾಪಿತ ಜಮೀನುಗಳಲ್ಲಿ ನಮೂನೆ 57ರಡಿ ಅರ್ಜಿಗಳು ಸ್ವೀಕೃತವಾಗಿದ್ದು, ಸದರಿ ಜಮೀನುಗಳು ಆಕಾರ್ ಬಂದ್‌ನಂತೆ ಖರಾಬು ಜಮೀನುಗಳಾಗಿದ್ದು, ಡಯಾಗ್ಲಾಟ್ ಪ್ರಕಾರ ರಾಳ್ಳಗುಡ್ಡ, ಕೊಂಡ ಎಂದು ನಮೂದಾಗಿರುವುದರಿಂದ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108-ಐ ರನ್ವಯ ಮಂಜೂರು ಮಾಡಲು ಅವಕಾಶವಿರುವುದಿಲ್ಲ.

**ಆರ್‌ಡಿ 60 ಎಲ್‌ಜಿಇ 2023**

**[ಕೃಷ್ಣ ಬೈರೇಗೌಡ]**
ಕಂದಾಯ ಸಚಿವರು